
ಆತ ತನ್ನನ್ನು ಮನೆಯವರೆಗೂ ಬಿಟ್ಟು ಹೋಗಿದ್ದ. ಕ್ರಮೇಣ ಸ್ನೇಹ ಬಲವಾಗಿತ್ತು. ತನ್ನ ಮದುವೆ ಇನ್ನು ಆಗಿಲ್ಲವೆಂದಾಗ ನಂಬಿದಳು. ಆತನ ನಡೆನುಡಿ, ಜಾಣತನ, ಪ್ರಬುದ್ಧ ನಡವಳಿಕೆ ಬಹುಬೇಗ ತನ್ನ ಸೆಳೆದಿದ್ದು ಆಕೆಗೆ ಗೊತ್ತಿತ್ತು. ಕಂಪನಿಯ ಇಂಜಿನಿಯರ್ ಆಗಿ ಬಂದ ಅವನು ಪರಿಸರ ನಾಶದ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದ. ಒಂದು ದಿನ ಇವಳ ಜೊತೆ ಮಾತನಾಡುವಾಗ 'ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ನಾಶ ಜಗತ್ತಿನ ನಾಶಕ್ಕೆ ಮನುಷ್ಯ ಬರೆಯುತ್ತಿರುವ ಮುನ್ನುಡಿ' ಎಂದಿದ್ದ. ಇವೆಲ್ಲ ಸುಂದರ ಪ್ರಕೃತಿಯಲ್ಲಿಯೇ ಬಾಲ್ಯವನ್ನು ಕಳೆದು ಯೌವ್ವನದ ಹೊಸ್ತಿಲಲ್ಲಿರುವ ಅವಳಿಗೆ ಆಪ್ತವಾಗಿದ್ದವು. ಅವನೂ ಆಪ್ತನಾಗುತ್ತಾ ನಡೆದ.

ಮಳೆಯ ಸುಣುಕು ಬಿಡದೇ ಊರನ್ನು ಮೆತ್ತಿಕೊಂಡಿತ್ತು. ದಿನಗಳು ಉರುಳಿದ್ದೆ ಕಂಚಿನಬೈಲಿನ ಜನರಿಗೆ ಗೊತ್ತಾಗಲಿಲ್ಲ. ನಾಗರಪಂಚಮಿ, ನೂಲಹುಣ್ಣಿಮೆ ಹಬ್ಬಗಳೆಲ್ಲಾ ಬಂದುಹೋದವು. ಹಬ್ಬ ಹರಿದಿನಗಳನ್ನು ಜಬರದಸ್ತ ಆಗಿಯೇ ಮಾಡಿದರು. ಒಂದಿಬ್ಬರು ಮನೆಯವರು ಯಾವ ಉಸಾಬರಿಯೂ ಬೇಡವೆಂದವರು ಇದ್ದುದ್ದರಲ್ಲೇ ಬೇಯಿಸಿಕೊಂಡು ಉಂಡರೆ ಕೆಲವರಂತೂ ನೆಲಕ್ಕೆ ಕಾಲೇ ತಾಗುತ್ತಿಲ್ಲ ಎಂಬಂತೆ ನಡೆಯುತ್ತಿದ್ದರು. ಬೇಸಿಗೆಯ ದಿನಗಳಂತೂ ಸಖತ್ತಾಗಿದ್ದವು. ಮೋಹಿತ ಅದೆಷ್ಟು ಸಲ ಬೇಬಿಯ ಮನೆಯವರೆಗೂ ಬಂದು ಹೋದನೋ, ಸ್ವತಃ ಅವಳಿಗೇ ಗೊತ್ತಿರಲಿಲ್ಲ. ಬೀರಮ್ಮಕ್ಕಗೆ ಅನುಮಾನ ಬಂದರೂ ಇರಲಿಕ್ಕಿಲ್ಲ. ಕಲಿತ ಹುಡುಗಿ ಸ್ನೇಹದಿಂದ ಇದ್ದಿರಬಹುದು ಎಂದುಕೊಂಡಳು. 'ತನ್ನ ನಸೀಬು ಹೀಗಾದದ್ದು ಮಗಳಿಗೂ ಆಗದೇ ಇರಲಿ ದೇವರೇ!' ಎಂದು ಬೇಡಿಕೊಳ್ಳುತ್ತಿದ್ದಳು. ಆಗಾಗ ತಾಯಿಯ ಎಚ್ಚರಿಕೆಯ ಮಾತುಗಳು ಬೇಬಿಯ ಕಿವಿಗೆ ಅಪ್ಪಳಿಸುತ್ತಿದ್ದವು.

ಆದರೆ ಆ ದಿನ ರಾತ್ರಿ ಊಟಕ್ಕೆ ಕೂತಾಗ ಅನ್ನ ಎಲೆಗೆ ಬಡಿಸಿದ್ದಳು ಬೀರಮ್ಮಕ್ಕ, ಘಮ್ಮೆಂದು ಮೂಗಿಗೆ ಹೊಡೆದ ಅನ್ನದ ವಾಸನೆಗೆ ಬೇಬಿ ಗಕ್ಕನೆ ವಾಂತಿ ಮಾಡಿಕೊಂಡಳು. ಮೈಯಲ್ಲಿನ ಕಸುವೆಲ್ಲಾ ಉಡುಗಿ ಹೋದಂತೆ ಬೀರಮ್ಮಕ್ಕ ಕುಸಿದುಕೂತಳು. ಆ ಗಳಿಗೆ ತನ್ನ ಗ್ರಹಿಕೆ ಸುಳ್ಳಲ್ಲವೆನಿಸಿತು. ಅನಾಹುತವಾಗಿದೆ ಎಂದುಕೊಂಡು, 'ಏನಾಯ್ತೆ!, ಯಾಕೇ ಕಾರ್ಕಂಡೇ!, ಏನಾಗಿದು ನಿಂಗೆ? ಮೂರು ತಿಂಗಳಿಂದೂ ನೋಡ್ತಿಂವೆ, ದಿನಾಲು ದೀಪ ಹಚ್ಕಂತ ಕೂತೀ. ಆಗೇ ನಂಗೆ ಡೌಟು ಬಂದಿತು. ಏನ ಮಾಡ್ಕಂಡ್ಯೇ ನನ್ನ ಮಗಳೇ?' ಎಂದು ಗೋಳಾಡಲಾರಂಭಿಸಿದಳು. ಇಷ್ಟು ದಿನಗಳವರೆಗೆ ಎದೆಯೊಳಗೆ ಇಟ್ಟುಕೊಂಡ ಕಹಿಯನ್ನು ಹೊರಹಾಕಲೇಬೇಕು ಎನ್ನಿಸಿತು ಬೇಬಿಗೆ. ನಿನ್ನೆಯಷ್ಟೇ ಅವನ ಗುಂಗಿನಲ್ಲೇ ತೆಂಗಿನ ಕಾಯಿ ಒಡೆಯುತ್ತಿದ್ದವಳ ಗಮನ ತಪ್ಪಿ ಬಲಗೈ ಮೇಲೆ ಕತ್ತಿ ಕೂತಿತ್ತು. ಇಷ್ಟಗಲದ ಗಾಯ. ತಾಯಿಗೆ ತೋರಿಸಿರಲಿಲ್ಲ ಆಕೆ. ಅರಿಸಿನ ಹಾಕಿ ಬಟ್ಟೆ ತುಂಡು ಕಟ್ಟಿಕೊಂಡಿದ್ದಳು. ಹಸಿಗಾಯ ನೋವು ಕೊಡುತ್ತಿತ್ತು ಮನಸ್ಸಿನ ಗಾಯದ ಜೊತೆ.



'ಅವ್ವಿ, ಹೀಂಗೆಲ್ಲಾ ಆತೀದಂದೆ ಗುತ್ತಿಲ್ಲಾಗಿತು!. ಅಂವ ನಂಗೆ ಮೋಸ ಮಾಡ್ಬಿಟ್ಟ. ಅವ್ನ ನಂಬಿತ್ನೇ ನಾನು. ಘನ ಗುಣದವ ಅಂದ್ಕಂಡಿ ನಂಬಿಬಿಟ್ಟೆ ಅವ್ವಿ. ಬ್ಯಾಡ ಬ್ಯಾಡ ಅಂದ್ರೂ ಕೇಳ್ನಿಲ್ಲಾ. ಈಗೇ ನೋಡದ್ರೆ ನಂಗೇ ಮದಿ ಆಗೀದು. ಇದರಾ ತೆಗಿಸ್ಕಂಬಾ. ನಾ ದುಡ್ಡು ಕೊಡ್ತಿ ಅಂತ್ಯಾ. ಈಗೀಗೆ ಇಲ್ಲಿಗೇ ಬರೂನೂಕಲಾ. ನಾ ನಿಂಗೆ ಮೋಸ ಮಾಡ್ಬಿಟ್ಟೆ ಅವ್ವಿ!' ಎನ್ನುತ್ತಾ ತಾಯಿಯ ಮಡಿಲಿಗೆ ತಲೆ ಇಟ್ಟಳು ಮಗಳು. 'ಮಾದೇವ ಮಾವಂಗೇ ಹೇಳ್ವಾ ತಡಿ,ಅಂವಾ ಏನಾರೂ ಮಾಡ್ವ' ಅಂದರೆ, 'ಬ್ಯಾಡ ಅವ್ವಿ. ನಾನು ಮುಂದಿನ ತಿಂಗಳು ಹೊನ್ನಾವರಕೆ ಹೋತಿ. ಅಲ್ಲಿ ನನ್ನ ದೋಸ್ತಿ ಇದು. ಕ್ರಿಸ್ಚಿಯನೋಳು ಅದಕೆ ಹೇಳೀ. ನೀ ಏನೂ ಹೆದರಬ್ಯಾಡ. ನಾನೂ ಎಲ್ಲ ವ್ಯವಸ್ತೇ ಮಾಡಸ್ತಿ. ಬಾ